ಅಗಲ ಸಾಲುಗಳಲ್ಲಿ ಕಬ್ಬಿನ ನಾಟಿ

ಕಬ್ಬು ನಮ್ಮ ರಾಜ್ಯದ ವಾಣಿಜ್ಯ ಬೆಳೆಗಳಲ್ಲಿ ಪ್ರಮುಖವಾದುದು ರಾಜ್ಯದ ಮಂಡ್ಯ, ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳನ್ನು ಸಕ್ಕರೆ ಜಿಲ್ಲೆಗಳೆಂದು ಕರೆಯಬಹುದು. ಕಬ್ಬು ಈ ಭಾಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಾಗುವಳಿಯಾಗುತ್ತಿರುವುದಲ್ಲದೆ ಹೆಚ್ಚಿನ ಸಂಖ್ಯೆಯಲ್ಲಿ ಸಕ್ಕರೆಯ ಕಾರ್ಖಾನೆಗಳು ಸಹ ಇಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಈ ಭಾಗದ ಮಣ್ಣು ನೀರು ಹಾಗೂ ಹವಾಮಾನ ಬೆಳೆಯ ಸಾಗುವಳಿಗೆ ಅತ್ಯಂತ ಸೂಕ್ತವಾಗಿರುವುದರಿಂದ ಈ ಬೆಳೆಯು ಬೇಸಾಯ ಲಾಭದಾಯಕವಾಗಿರುವದು. ಆದರೆ ಇತ್ತೀಚಿನ ವರ್ಷಗಳಲ್ಲಿ ಪ್ರತಿ ಎಕರೆಗೆ ಸುಮಾರು 60-65 ಟನ್‌ಗಳಷ್ಟು ಇಳುವರಿಯನ್ನು ಪಡೆಯುವ ಬದಲು ಪ್ರತಿ ಎಕರೆಗೆ ನಾಟಿ ಮಾಡಿದ ಕಬ್ಬಿನಿಂದ ಕೇವಲ 50-55 ಟನ್ ಹಾಗೂ ಕುಳೆ ಕಬ್ಬಿನಲ್ಲಿ 20-25 ಟನ್‌ಗಳವರೆಗಿನ ಇಳುವರಿಯ ಮಟ್ಟ ಚಿಂತೆಗೆ ಕಾರಣವಾಗಿದೆ, ಇದಕ್ಕೆ ಹಲವಾರು ಕಾರಣಗಳುಂಟು. ಸರಿಯಾದ ಸಮಯಕ್ಕೆ ಸೂಕ್ತ ಬೇಸಾಯ ಕ್ರಮಗಳನ್ನು ಅಳವಡಿಸದಿರುವುದು ಒಂದು ಪ್ರಮುಖ ಕಾರಣ. ಬೇಸಾಯ ಕ್ರಮಗಳಲ್ಲಿ ನಾಟಿ ಸಮಯದ ನಿರ್ವಹಣೆ ಕ್ರಮಗಳನ್ನು ನಾವೀಗ ಗಮನಿಸೋಣ.

ನಮ್ಮ ಭೂಮಿಯ ಫಲವತ್ತತೆ ಹಾಗೂ ಉತ್ಪಾದಕತೆಯನ್ನು ಕಾಪಾಡಿಕೊಂಡು ಹೋಗುವಲ್ಲಿ ನಾಟಿ ಪದ್ಧತಿಯು ಪ್ರಮುಖ ಪಾತ್ರ ವಹಿಸುತ್ತದೆ. ಹಲವಾರು ವರ್ಷಗಳಿಂದ ಸೂಕ್ತವಾದ ಪದ್ಧತಿಯಲ್ಲಿ ನೀರಾವರಿ ಮಾಡದೇ ಇರುವುದರಿಂದ ಮಣ್ಣಿನ ಫಲವತ್ತತೆಯು ಕ್ಷೀಣಿಸಿ ಮಣ್ಣು ಜವಳು ಮತ್ತು ಕ್ಷಾರವಾಗಿ ಪರಿವರ್ತನೆಗೊಳ್ಳುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಸೂಕ್ತ ನಾಟಿ ಪದ್ಧತಿಯನ್ನು ಅಳವಡಿಸಿ ಅನೇಕ ಲಾಭಗಳಿವೆ.

ಅವುಗಳೆಂದರೆ

ಮಣ್ಣಿನ ಫಲವತ್ತತೆ ಮತ್ತು ಉತ್ಪಾದಕತೆಯನ್ನು ಕ್ರಮೇಣ ಹೆಚ್ಚಿಸುವುದು, ಪ್ರತಿ ಎಕರೆಗೆ ಬೇಕಾಗುವಷ್ಟು ಪ್ರಮಾಣದಲ್ಲಿ ಸಸಿಗಳ ಸಂಖ್ಯೆಯನ್ನು ಕಾಪಾಡುವುದು, ಮಣ್ಣಿನ ಫಲವತ್ತತೆಗೆ ಮಾರಕವಾಗದಂತಹ ನೀರಾವರಿ ಪದ್ಧತಿಯನ್ನು ಅಳವಡಿಸುವುದು, ಮತ್ತು ಅಂತರ ಬೆಳೆಯಾಗಿ ಸೂಕ್ತ ಬೆಳೆಗಳನ್ನು ಬೆಳೆದು ಎಕರೆವಾರು ಇಳುವರಿಯನ್ನು ಹೆಚ್ಚಿಸುವುದು ಇವೇ ಮುಂತಾದವು.

ನಾಟಿ ಮಾಡುವಾಗ ಅನುಸರಿಸಬಹುದಾದ ಕ್ರಮಗಳು

ಹೊಸದಾಗಿ ನೀರಾವರಿಗೆ ಅಳವಡಿಸಿದಂತಹ ಒಳ್ಳೆಯ ಫಲವತ್ತಾದ ಕಪ್ಪು ಮತ್ತು ಕಪ್ಪು ಮಿಶ್ರಿತ ಕೆಂಪು ಮಣ್ಣಿನಲ್ಲಿ 4 ಫೂಟು (120 ಸೆಂ.ಮಿ) ಅಂತರದ ಸಾಲುಗಳಲ್ಲಿ ನಾಟಿ ಮಾಡುವುದು ಸೂಕ್ತ/ ಈಗಾಗಲೇ ಬಹಳಷ್ಟು ವರ್ಷಗಳಿಂದ ನೀರಾವರಿಗೆ ಒಳಪಟ್ಟಿರುವ ಮತ್ತು ಭೂಮಿಯ ಫಲವತ್ತತೆಯ ಕಡಿಮೆಯಾಗಿರುವಂತಹ ಭೂಮಿಯ ಮೇಲೆ ಒತ್ತಡ ಕಡಿಮೆ ಮಾಡಿ ಇಳುವರಿ ಮಟ್ಟವನ್ನು ಕಾಪಾಡುವ ಸಾಲಿನಿಂದ ಸಾಲಿಗೆ 5 ಅಡಿ (150 ಸೆಂ.ಮೀ.) ಅಂತರವನ್ನು ಕಾಪಾಡುವುದು ಸೂಕ್ತ.

ಮರಡಿ ಮತ್ತು ಗರಸುಯುಕ್ತ, ಸರಿಯಾಗಿ ನೀರು ಹಿಡಿಯದಂಥ ಮತ್ತು ಅಂಕು-ಡೊಂಕಾದ ಭೂಮಿಯಲ್ಲಿ ಕುಣಿ (3' X 3' X 1.5') ಪದ್ಧತಿ ಅನುಸರಿಸಿ, ಪ್ರತಿ ಎಕರೆಗೆ 1200 ಕುಣಿಗಳು ಇರುವಂತೆ ನಾಟಿ ಮಾಡುವದು ಸೂಕ್ತ. ನಾಟಿ ಮಾಡುವಾಗ ಕಡ್ಡಾಯವಾಗಿ ಎರಡು ಕಣ್ಣುಗಳುಳ್ಳ ತುಂಡುಗಳನ್ನು ನಾಟಿ ಮಾಡುವುದರಿಂದ ಸಸಿಗಳ ಸಂಖ್ಯೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆಯಬಹುದು.

ಅಗಲವಾದ ಸಾಲುಗಳಲ್ಲಿ ನಾಟಿ ಮಾಡುವಾಗ ಸಿಓ ಸಿ-671 (ಗಂಗಾವತಿ) ತಳಿಯನ್ನು ಉಪಯೋಗಿಸಿ ಕಬ್ಬಿನ ತುಂಡುಗಳನ್ನು ಸಾಲಿನಲ್ಲಿ ಅಡ್ಡಲಾಗಿ ಇಟ್ಟು ಪ್ರತಿ ತುಂಡಿನಿಂದ ತುಂಡಿಗೆ 8-10 ಸೆಂ.ಮೀ. ಅಂತರದಲ್ಲಿ 3-4 ಇಂಚಿನಷ್ಟು ಮಣ್ಣು ಹೊದಿಕೆ ಮಾಡಬೇಕು. ನಂತರ ಅದೇ ಸಾಲುಗಳಲ್ಲಿ ನೀರು ಉಣಿಸಬೇಕು, ಇತರ ತಳಿಗಳಾದ ಸಿಓ -92020, ಸಿಓ-86032, ಸಿಓ-8011, ಸಿಓ-8014, ಸಿಓ-88028, ಸಿಓ-88121 ಇವು ಹೆಚ್ಚಿನ ಪ್ರಮಾಣದಲ್ಲಿ ಕುಳೆ ಮತ್ತು ಮರಿಯೊಡೆಯುವ ಸಾಮರ್ಥ್ಯವಿರುವುದರಿಂದ ಸಾಲಿನಲ್ಲಿ ಎರಡು ಕಣ್ಣಿನ ತುಂಡುಗಳನ್ನು ಸಾಲಿನ ದಿಕ್ಕಿನಲ್ಲಿ ಇಟ್ಟು ಸಿಓಸಿ-671 ತಳಿಗೆ ಅನುಸರಿಸಿದ ಮಾರ್ಗವನ್ನು ಪಾಲಿಸಬೇಕು.

ಕುಣಿ ಪದ್ಧತಿಯಲ್ಲಿ ಸಿಓಸಿ-671 ತಳಿ ಉಪಯೋಗಿಸಿದರೆ ಪ್ರತಿ ಗುಣಿಗೆ 20 ತುಂಡುಗಳನ್ನು ಮತ್ತು ಇತರ ತಳಿಗಳಿದ್ದರೆ, ಪ್ರತಿ ಗುಣಿಗೆ 15 ತುಂಡುಗಳನ್ನು ನಾಟಿ ಮಾಡಬೇಕು. ನಾಟಿ ಮಾಡುವ ಪೂರ್ವದಲ್ಲಿ, ಪ್ರತಿ ಗುಣಿಯಲ್ಲಿ 3/4 ರಷ್ಟು ಫಲವತ್ತಾದ ಮಣ್ಣು, ಮರಳು ಮತ್ತು ಸಗಣಿ ಅಥವಾ ಎರೆಹುಳು ಗೊಬ್ಬರ ಮಿಶ್ರಣವನ್ನು ತುಂಬಿ ನಾಟಿ ಮಾಡಬೇಕು. ಈ ನಾಟಿ ಪದ್ಧತಿಗಳನ್ನು ಅನುಸರಿಸಿದಲ್ಲಿ ಪ್ರತಿ ಎಕರೆಗೆ ಬೇಕಾಗುವ ಬೀಜದ ಪ್ರಮಾಣವು ಕೇವಲ 1.5 -2.0 ಟನ್‌ನಷ್ಟು ಮಾತ್ರ, ಶೇ. 20-25 ರಷ್ಟು ಭಾಗ ಮಾತ್ರ ನೀರಾವರಿಗೆ ಮೊದಲ ಮೂರು ತಿಂಗಳವರೆಗೆ ಒಳಪಡುತ್ತದೆ. ಉಳಿದ ಶೇ. 70-75 ರಷ್ಟು ಮಣ್ಣಿನ ಭಾಗವನ್ನು ಒಣ ಬೇಸಾಯದಲ್ಲಿದ್ದಂತಹ ಒಳ್ಳೆಯ ಮಣ್ಣಿನ ರಚನೆಯನ್ನು ಕಾಪಾಡಬಹುದು. ಬೇಸಿಗೆಯಲ್ಲಿ ವಿದ್ಯುತ್ ಮತ್ತು ನೀರಿನ ಅಭಾವವನ್ನು ಇಂತಹ ಪದ್ಧತಿಗಳಿಂದ ನೀಗಿಸಬಹುದು.

ಕಬ್ಬಿನಲ್ಲಿ ಅಂತರ ಬೆಳೆಯಾಗಿ ಆಗಸ್ಟ್ ತಿಂಗಳಿನಿಂದ ಅಕ್ಟೋಬರ್ ಮೊದಲನೆ ವಾರದೊಳಗೆ ನಾಟಿ ಮಾಡಿದಂತಹ ಅಲ್ಪಾವಧಿ ಕಬ್ಬಿನ ತಳಿಯಲ್ಲಿ ಹಸಿರೆಲೆ ಗೊಬ್ಬರದ ಸಲುವಾಗಿ ಸೆಣಬು, ಡಯಾಂಚಾ ಅಥವಾ ತೃಣಧಾನ್ಯಗಳ ಬೀಜಗಳನ್ನು ಪ್ರತಿ ಎಕರೆಗೆ 20-25 ಕಿಲೋ ಪ್ರಮಾಣದಲ್ಲಿ ಎರಡು ಕಬ್ಬಿನ ಸಾಲುಗಳ ಮಧ್ಯೆ ಕಬ್ಬು ನಾಟಿ ಮಾಡಿದ 45 ದಿವಸಕ್ಕೆ ಅಂತರ ಬೆಳೆಯಾಗಿ ಬಿತ್ತಬೇಕು. ನಂತರ 45 ದಿವಸಕ್ಕೆ ಹಸಿರೆಲೆ ಗೊಬ್ಬರದ ಬೆಳೆಯು ಶೇ. 25ರಷ್ಟು ಹೂವಾಡುವ ಹಂತದಲ್ಲಿರುವಾಗ ಅದನ್ನು ಮುಗ್ಗಿ ಹೊಡೆದರೆ ಪ್ರತಿ ಎಕರೆಗೆ 3-4 ಟನ್‌ನಷ್ಟು ಒಳ್ಳೆಯ ಸಂಪದ್ಭರಿತ ಸಾವಯವ ಗೊಬ್ಬರವನ್ನು ಮಣ್ಣಿಗೆ ಸೇರಿಸಿದಂತಾಗುತ್ತದೆ. ಈ ರೀತಿಯಲ್ಲಿ ಮಣ್ಣಿನಲ್ಲಿಯ ಸಾವಯವ ಪದಾರ್ಥವನ್ನು ಹೆಚ್ಚಿಸಿ ಭೂಮಿಯ ಫಲವತ್ತತೆ ಹಾಗೂ ಉತ್ಪಾದಕತೆಯನ್ನು ಬಹಳ ವರ್ಷದವರೆಗೆ ಕಾಪಾಡಬಹುದು ಮತ್ತು ನೈಸರ್ಗಿಕ ವೈಪರಿತ್ಯದಿಂದಾಗುವ ಏರುಪೇರುಗಳನ್ನು ತಡೆಗಟ್ಟಬಹುದು.

ಅಕ್ಟೋಬರ್‌ನಿಂದ ನವೆಂಬರ್ ತಿಂಗಳುಗಳಲ್ಲಿ ನಾಟಿ ಮಾಡಿದ ಕಬ್ಬಿನಲ್ಲಿ ಸೂಕ್ತ ಹಿಂಗಾರಿ ಬೆಳೆಗಳಾದ ಕಡಲೆ, ಅಗಸಿ, ಈರುಳ್ಳಿ ಮತ್ತು ಕಾಯಿಪಲ್ಲೆಗಳಾದ ಸವತೆ, ಬೆಂಡೆ, ಚವಳಿ, ಮೆಂತೆ, ಕೊತಂಬರಿ ಇತ್ಯಾದಿಗಳನ್ನು ನಾಟಿ ಮಾಡುವುದರಿಂದ ಈ ಅಂತರ ಬೆಳೆಗಳ ಮುಖಾಂತರ ಕಬ್ಬಿನ ಬೇಸಾಯಕ್ಕೆ ತಗಲುವ ಖರ್ಚನ್ನು ನೀಗಿಸಬಹುದು. ಡಿಸೆಂಬರ್ ತಿಂಗಳಿನಿಂದ ಜನವರಿ ಮೊದಲನೆ ಪಕ್ಷದವರೆಗೆ ನಾಟಿ ಮಾಡಿದ ಕಬ್ಬಿನಲ್ಲಿ ಶೇಂಗಾ ಮತ್ತು ಕಲ್ಲಂಗಡಿ ಬೆಳೆಗಳನ್ನು ಅಂತರ ಬೆಳೆಯಾಗಿ ಅತಿ ಲಾಭದಾಯಕವಾಗಿ ಬೆಳೆಯಬಹುದು. ಜನವರಿ ತಿಂಗಳಿನಿಂದ ಫೆಬ್ರವರಿ ತಿಂಗಳ ಮೊದಲನೆ ಪಕ್ಷದವರೆಗೆ ನಾಟಿ ಮಾಡಿದ ಕಬ್ಬಿನಲ್ಲಿ ಉದ್ದು ಮತ್ತು ಹೆಸರು ಬೆಳೆಗಳನ್ನು ಅಂತರ ಬೆಳೆಯಾಗಿ ಬೆಳೆದು ಉತ್ತಮ ಇಳುವರಿ ಪಡೆಯಬಹುದಲ್ಲದೇ ಮಣ್ಣಿನ ಫಲವತ್ತತೆಯನ್ನು ಕಾಪಾಡಿಕೊಳ್ಳಲು ಸಹಕಾರಿಯಾಗುತ್ತದೆ.

ಅಗಲವಾದ ಸಾಲುಗಳಲ್ಲಿ ನಾಟಿ ಮಾಡುವುದರಿಂದ ಅಂತರ ಬೆಳೆಯ ಪ್ರಯೋಜನ ಪಡೆಯಬಹುದು. ಕಬ್ಬು ನಾಲ್ಕು ತಿಂಗಳ ಬೆಳೆಯಿದ್ದಾಗ ಅಂತರ ಬೆಳೆಯನ್ನು ತೆಗೆದು ಬೋದು ಏರಿಸಬೇಕು. ಬೇಸಿಗೆ ಸಮಯದಲ್ಲಿ ನೀರಿನ ಕೊರತೆಯಾದಲ್ಲಿ ಸಾಲು ಬಿಟ್ಟು ಸಾಲು ನೀರು ಹಾಯಿಸಿ ನೀರಿನ ಅಭಾವವನ್ನು ನಿಭಾಯಿಸಬೇಕು. ಇದರಿಂದಾಗಿ ಕಬ್ಬಿನ ಇಳುವರಿ ಕಡಿಮೆಯಾಗಬಹುದಾದ ಸಾಧ್ಯತೆಯನ್ನು, ಬದಲಾಗಿ ಶೇ. 30 ರಷ್ಟು ನೀರನ್ನು ನಾವು ಉಳಿತಾಯ ಮಾಡಬಹುದು. ಮೂಲ ಕಬ್ಬು ಕಟಾವು ಆದ ನಂತರ ಕುಳಿ ಕಬ್ಬಿನ ನಿರ್ವಹಣೆಯಲ್ಲಿ ಈ ಅಗಲವಾದ ಸಾಲು ಪದ್ಧತಿ ಬಹಳ ಮಹತ್ವದ ಪಾತ್ರವಹಿಸುತ್ತದೆ.

ಕಬ್ಬು ಕಟಾವಾದ ನಂತರ ಪ್ರತಿ ಎಕರೆಗೆ 3-4 ಟನ್‌ನಷ್ಟು ರವದಿ ಸಿಗುತ್ತದೆ. ಆದರೆ ಬಹಳಷ್ಟು ರೈತರು ಇದನ್ನು ಸುಟ್ಟು ಹಾಕುತ್ತಾರೆ. ಇದರಿಂದ 4 ಟನ್‌ನಷ್ಟು ಸಾವಯವ ವಸ್ತು ನಾಶವಾಗುವುದಲ್ಲದೇ, ಇದರಿಂದ ಉಂಟಾದ ಉಷ್ಣತೆಯಿಂದ ಮಣ್ಣಿನಲ್ಲಿರುವ ಸಾವಯವ ವಸ್ತು ಸಹ ಸುಟ್ಟು ನಾಶವಾಗುತ್ತದೆ. ಅಷ್ಟೇ ಅಲ್ಲದೆ ಕೋಟ್ಯಾಂತರ ಸಂಖ್ಯೆಯಲ್ಲಿ ಪ್ರಯೋಜನಕಾರಿ ಅಣು ಜೀವಿಗಳು ಅಲ್ಲದೆ ಕಬ್ಬಿನ ಕಣ್ಣುಗಳು ಕೂಡ ನಾಶವಾಗುತ್ತವೆ. ತತ್ಪರಿಣಾಮವಾಗಿ, ಮಣ್ಣಿನ ಫಲವತ್ತತೆಯು ನಾಶವಾಗಿ ಇದರಿಂದ ಸಸಿಗಳ ಸಂಖ್ಯೆ ಕಡಿಮೆಯಾಗಿ ಎಕರೆವಾರು ಇಳುವರಿ ಕ್ಷೀಣಿಸುತ್ತದೆ. ಇತ್ತೀಚೆಗೆ ರೈತರು ಈ ದುಷ್ಪರಿಣಾಮದ ಬಗ್ಗೆ ಅರಿತುಕೊಂಡಿದ್ದಾರೆ. ಆದರೆ ಕಬ್ಬಿನ ರವದಿ ಇದ್ದ ಸ್ಥಳದಲ್ಲಿಯೇ ನಿರ್ವಹಣೆ ಮಾಡಲು ಈಗ ಅನುಸರಿಸುತ್ತಿರುವ 2 ಅಥವಾ 3 ಅಡಿ ಅಂತರದ ಸಾಲುಗಳ ಪದ್ಧತಿಯು ಅನುಕೂಲಕರವಾಗಿಲ್ಲ. ಅಗಲವಾದ ಸಾಲು ಪದ್ಧತಿಯನ್ನು ಅಳವಡಿಸಿದಲ್ಲಿ ಎರಡು ಕಬ್ಬಿನ ಸಾಲುಗಳ ಮಧ್ಯೆ ಸಾಕಷ್ಟು ಸ್ಥಳಸಿಗುವುದರಿಂದ ರವದಿಯನ್ನು ಒಂದು ಸಾಲು ಬಿಟ್ಟು ಇನ್ನೊಂದು ಸಾಲಿನಲ್ಲಿ ತುಂಬಿ ಖಾಲಿ ಇದ್ದ ಸಾಲುಗಳಲ್ಲಿ ಮಾತ್ರ ರೆಂಟೆ ಹೊಡೆದು, ಬೇರು ಹರಿದು ಗೊಬ್ಬರ ಹಾಕಿ ನೀರು ಹಾಯಿಸುವುದರಿಂದ ಪ್ರತಿಶತ 40-50 ರಷ್ಟು ನೀರುಣಿಸುವ ಕ್ಷೇತ್ರವನ್ನು ಕಡಿಮೆ ಮಾಡಬಹುದು. ರವದಿ ತುಂಬಿದ ಸಾಲಿನಲ್ಲಿ ಸಾಕಷ್ಟು ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವಿರುವುದರಿಂದ ತಡವಾಗಿ ನೀರನ್ನು ಹಾಯಿಸಬಹುದು ಮತ್ತು ನೀರಿನ ಅಭಾವವಿದ್ದರೆ ಸಾಲು ಬಿಟ್ಟು ಸಾಲು ನೀರು ಹಾಯಿಸಿ ನೀರಿನ ಕೊರತೆಯನ್ನು ನಿಭಾಯಿಸಬಹುದು. ಇದಲ್ಲದೆ ಲಭ್ಯವಿರುವ ನೀರಿನಲ್ಲಿ ಹೆಚ್ಚಿನ ಕ್ಷೇತ್ರವನ್ನು ನೀರಾವರಿಗೆ ಒಳಪಡಿಸಬಹುದು.

ಒಟ್ಟಿನಲ್ಲಿ, ಅಗಲದ ಸಾಲುಗಳಲ್ಲಿ ನಾಟಿ ಮಾಡುವುದರಿಂದ ಉತ್ತಮವಾಗಿ ಕಳೆ ಹತೋಟಿ ಮತ್ತು ನೀರಿನ ಸಮರ್ಪಕ ಬಳಕೆ ಸಾಧ್ಯವಾಗುವದು. ಸೂಕ್ತವಾದ ಅಣುಜೀವಿ ಗೊಬ್ಬರ ಉಪಯೋಗಿಸಿ ರವದಿಯನ್ನು ಶೀಘ್ರವಾಗಿ ಕಳೆಯುವಂತೆ ಮಾಡಿ, ಸ್ಥಳೀಯವಾಗಿ ಬೆಳೆಯೊಂದಿಗೆ ಉತ್ತಮ ಕಾಂಪೋಸ್ಟ್ ಗೊಬ್ಬರ ತಯಾರಿಸಬಹುದು. ಅಲ್ಲದೆ, ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆಯ ವೃದ್ಧಿಯಿಂದಾಗಿ ಹೆಚ್ಚು ವ್ಯತ್ಯಾಸವಿಲ್ಲದಂತೆ ನಿರೀಕ್ಷಿತ ಇಳುವರಿ ಮಟ್ಟವನ್ನು ನಿರಂತರವಾಗಿ ಪಡೆಯಬಹುದು.

ಬಿ.ಟಿ. ನಾಡಗೌಡ ಮತ್ತು ವೈ. ಕೆ. ಕೋಟಿಕಲ್
ಕೃಷಿ ವಿಸ್ತರಣಾ ಶಿಕ್ಷಣ ಘಟಕ, ಬಾಗಲಕೋಟೆ